CC No.719-19

<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ</u>

ಚಾಸಾಃ 11 ಫ್ರಾಸಾಃ 9

| | | |
|---|---|---|
| ಸಾಕ್ಷಿಯ ಹೆಸರು | : | ಸುರೇಶ ತಂದೆ ಶೇಖರಗೌಡ ಪಾಟೀಲ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಶಿರಸ್ತೆದಾರ, ಕಂದಾಯ ಇಲಾಖೆ ಸವಣೂರ |
| ವಿಳಾಸ | : | ಸವಣೂರ |

<u>ದಿನಾಂಕಃ 22.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ನಾನು 2015 ರಿಂದ 2022 ಲಕ್ಷ್ಮೇಶ್ವರದಲ್ಲಿ ಕಂದಾಯ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.07.2016 ರಂದು 1 ನೇ ಆರೋಪಿಯು ನೀಡಿದ ಅರ್ಜಿ ಮತ್ತು ದಾಖಲೆಗಳಂತೆ ಸರ್ವೇ ನಂ.407/2 ಎ2 ರ ಪಹಣಿ ಪತ್ರಿಕೆಯನ್ನು ಅವರ ತಂದೆ ರಾಜೇಸಾಬ ರವರು ಮರಣ ಹೊಂದಿದ ಕಾರಣ ವಾರಸಾ ಖಾತೆ ಮಾಡಲು ಅರ್ಜಿ ನೀಡಿದ್ದು ಮಾನ್ಯ ಗ್ರಾಮಲೇಕ್ಕಾಧಿಕಾರಿಗಳಿಂದ ವರದಿ ಸ್ವೀಕರಿಸಿ ಮ್ಯೂಟೇಶನ ಅಂಗೀಕರಿಸಲು ನಮೂನೆ 12 ಮತ್ತು 21 ರಲ್ಲಿ ಪ್ರಚಾರ ಮಾಡಿರುತ್ತೇನೆ. ಯಾವುದೇ ತಕರಾರು ಬರದೆ ಇದ್ದ ಕಾರಣ ನೀಡಿದ ದಾಖಲೆ ಹಾಗು ವಂಶಾವಳಿಯಂತೆ ಮ್ಯೂಟೇಶನ ಅಂಗೀಕರಿಸಿ ಖಾತೆ ಬದಲಾವಣೆ ಮಾಡಲು ವಿಶೇಷ ತಹಶೀಲ್ದಾರ ರವರಿಗೆ ಅನೂಮೊದನೆ ಸಲ್ಲಿಸಿರುತ್ತೇನೆ. ತದನಂತರ ಪೋಲಿಸರು ಮಾಹಿತಿ ಕೇಳಿದ್ದು ಆ ಕಾಲಕ್ಕೆ ಗ್ರಾಮಲೇಕ್ಕಾಧಿಕಾರಿಗಳು ಸ್ಥಾನಿಕ ಪರೀಶಿಲನೆ ನಡೆಸದೆ ಸುಳ್ಳು ವರದಿ ತಯಾರಿಸಿರುವ ಕುರಿತು ತಿಳಿದುಕೊಂಡಿರುತ್ತೇನೆ.

ನಾನು ಅನುಮೊದನೆಗೆ ಕಳುಹಿಸಿಕೊಟ್ಟಿರುವಂತಹ ಎಂ.ಆರ್.ಸಂಖ್ಯೆ ಎಚ-30/2016-17 ರ ಮ್ಯೂಟೇಶನ ಪ್ರತಿ ಹಾಗು ಇತರೆ ದಾಖಲೆಗಳನ್ನು ಪುಟ ಸಂಖ್ಯೆ 79 ರಿಂದ 85 ಎಂದು ಇದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ.17 ಎಂದು ಗುರುತಿಸಲಾಯಿತು. ದಿಃ 12.09.2019 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ- 1 ಮತ್ತು 5 ನೇ ಆರೋಪಿ ಪರವಾಗಿ</u>

<u>Sri. MMH, ವಕೀಲರಿಂದ</u>

ಗ್ರಾಮಲೇಕ್ಕಾಧಿಕಾರಿಗಳು ನೀಡಿದ ವರದಿಯಂತೆ ಮ್ಯೂಟೇಶನ ಅಂಗೀಕರಿಸಲು ನಮೂನೆ 12 ಮತ್ತು 21 ನ್ನು ಪ್ರಚಾರಪಡಿಸಿರುತ್ತೇನೆ ಎಂದರೆ ಸರಿ. ನಮೂನೆ 12 ಮತ್ತು 21 ಕ್ಕೆ ನಿಗದಿತ ಸಮಯದಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲ ಎಂದರೆ ಸರಿ. ಸದರಿ ಮ್ಯೂಟೇಶನ ಅಂಗೀಕರಿಸುವ ಕಾಲಕ್ಕೆ ಗ್ರಾಮಲೇಕ್ಕಾಧಿಕಾರಿಗಳು ನೀಡಿದ ವರದಿ ಸರಿಯಾಗಿ ಇತ್ತು ಎಂದರೆ ಸರಿ. ಪೋಲಿಸರು ಮಾಹಿತಿ ಕೇಳಿದ ಕಾಲಕ್ಕೆ ನಾನು ತನಿಖೆ ಮಾಡಲು 7 ನೇ ಆರೋಪಿಯು ಸ್ಥಾನಿಕ ಪರೀಶಿಲನೆ ನಡೆಸಿಲ್ಲ ಎಂಬ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಪೋಲಿಸರು ಮಾಹಿತಿ ಕೇಳಿದ ಕಾಲಕ್ಕೆ ನಾನು ಸ್ಥಾನಿಕ ಪರೀಶಿಲನೆ ನಡೆಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

<u>ಉಳಿದ ಆರೋಪಿತರ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.</u>

<u>ಮರು ವಿಚಾರಣೆ ಇಲ್ಲ</u>

<u>(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)</u>

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.

CC No.719-19

<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಶ್ಮೇಶ್ವರ</u>

ಚಾಸಾಃ 12 ಫ್ರಾಸಾಃ 10

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ ಸಲ್ಮಾ ಎಂ. ಕಣವಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಉಪನೋಂದಣಾಧಿಕಾರಿ, ರೋಣ |
| ವಿಳಾಸ | : | ರೋಣ |

<u>ದಿನಾಂಕಃ 22.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ನಾನು 2014 ರಿಂದ 2020 ಶಿರಹಟ್ಟಿಯಲ್ಲಿ ಉಪನೋಂದಣಾಧಿಕಾರಿ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.09.2019 ರಂದು ಲಕ್ಶ್ಮೇಶ್ವರ ಪೋಲಿಸರು ಸರ್ವೇ ನಂ.407/2 ಎ2 ರ ದಿಃ 27.01.1981 ರ ಖರೀದಿ ಪತ್ರದ ದೃಡಿಕೃತ ನಕಲನ್ನು ಪೂರೈಸುವಂತೆ ಮನವಿ ಸಲ್ಲಿಸಿದ್ದು ಸದರಿಯವರಿಗೆ ಖರೀದಿ ಪತ್ರದ ದೃಡಿಕೃತ ನಕಲನ್ನು ಪೂರೈಕೆ ಮಾಡಿರುತ್ತೇನೆ. ಸದರಿ ಖರೀದಿ ಪತ್ರವನ್ನು ನಿಪಿ.18 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- 1 ಮತ್ತು 5 ನೇ ಆರೋಪಿ ಪರವಾಗಿ</u>

<u>Sri. MMH, ವಕೀಲರಿಂದ</u>

ಪೋಲಿಸರು ದೃಡಿಕೃತ ಖರೀದಿ ಪತ್ರವನ್ನು ಪೂರೈಕೆ ಮಾಡುವಂತೆ ಯಾವುದೇ ಮನವಿ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 03.09.2019 ರಂದು ಲಕ್ಶ್ಮೇಶ್ವರ ಪೋಲಿಸರು ಸರ್ವೇ ನಂ.407/2 ಎ2 ರ ದಿಃ 27.01.1981 ರ ಖರೀದಿ ಪತ್ರದ ದೃಡಿಕೃತ ನಕಲನ್ನು ಪೂರೈಸುವಂತೆ ಮನವಿ ಸಲ್ಲಿಸಿದ್ದು ಸದರಿಯವರಿಗೆ ಖರೀದಿ ಪತ್ರದ ದೃಡಿಕೃತ ನಕಲನ್ನು ಪೂರೈಕೆ

ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಉಳಿದ ಆರೋಪಿತರ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.

<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ</u>

ಚಾಸಾಃ 15 ಫ್ರಾಸಾಃ 11

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ ಬ್ರಮರಾಂಬ ಗುಬ್ಬಿಶೆಟ್ಟಿ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತಿ ಜೀವನ |
| ವಿಳಾಸ | : | ಧಾರವಾಡ |

<u>ದಿನಾಂಕಃ 22.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ನಾನು 2019 ರಿಂದ 2022 ಲಕ್ಷ್ಮೇಶ್ವರದಲ್ಲಿ ತಹಶೀಲ್ದಾರ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.08.2019 ರಂದು ಆರಕ್ಷರ ಉಪನಿರೀಕ್ಷರಿಗೆ ಸರ್ವೆ ನಂ.407/2 ಎ2 ಮತ್ತು 407/2 ಎ 1 ರ 2001 ರಿಂದ 2018 ರವರೆಗಿನ ಪಹಣಿ ಪತ್ರಿಕೆ ಹಾಗು ಮ್ಯೂಟೇಶನ ಪ್ರತಿಯನ್ನು ಪೂರೈಸಿರುತ್ತೇನೆ. ಸದರಿ ಮಾಹಿತಿಯ ಪ್ರತಿಯು ಪುಟ ಸಂಖ್ಯೆ 101 ರಿಂದ 156 ಎಂದು ಇದ್ದು ಮಾಹಿತಿ ಪೂರೈಸಿದ ವಿವರದ ಪ್ರತಿಗಳನ್ನು ಕ್ರಮವಾಗಿ ನಿಪಿ.19 ಮತ್ತು ನಿಪಿ.20 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19 (ಎ) ಮತ್ತು ನಿಪಿ.20 (ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- 1 ಮತ್ತು 5 ನೇ ಆರೋಪಿ ಪರವಾಗಿ</u>

<u>Sri. MMH, ವಕೀಲರಿಂದ</u>

ಪೋಲಿಸರು ದೃಡಿಕೃತ ಖರೀದಿ ಪತ್ರವನ್ನು ಪೂರೈಕೆ ಮಾಡುವಂತೆ ಯಾವುದೇ ಮನವಿ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 29.08.2019 ರಂದು ಆರಕ್ಷರ ಉಪನಿರೀಕ್ಷರಿಗೆ ಸರ್ವೆ ನಂ.407/2 ಎ2

ಮತ್ತು 407/2 ಎ 1 ರ 2001 ರಿಂದ 2018 ರವರೆಗಿನ ಪಹಣಿ ಪತ್ರಿಕೆ ಹಾಗು ಮ್ಯೂಟೇಶನ ಪ್ರತಿಯನ್ನು ಪೂರೈಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಉಳಿದ ಆರೋಪಿತರ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.